# ನಾಥುಲಾ!




★ಚಿತ್ರ- ಲೇಖನ:
ಪೂರ್ಣಿಮಾ ಕಾನಹಳ್ಳಿ

ನಮ್ಮ ಭಾರತದ ಭೂಪಟದ ಮೇಲೆ ಕಣ್ಣಾಡಿಸುವಾಗ ಈಶಾನ್ಯದಲ್ಲಿ ವಿಜಯದ ಸಂಕೇತವೆಂಬಂತೆ 'ಥಮ್ಸ್ ಅಪ್' ಅಂದರೆ ಎತ್ತಿ ಹಿಡಿದ ಹೆಬ್ಬೆರಳಿನ ಆಕಾರದಂತೆ ಕಾಣುವ ರಾಜ್ಯವೇ ಸಿಕ್ಕಿಂ. ಭಾರತದ ರಾಜ್ಯಗಳಲ್ಲಿ ಗೋವಾ ನಂತರದ ಪುಟ್ಟ ರಾಜ್ಯ.

ಸಿಕ್ಕಿಂ ಪೂರ್ತಿ ಸುತ್ತಾಡಿದ ನಂತರ ನೀವು ಸ್ವಲ್ಪ ಸಮಯ ಮಾಡಿಕೊಂಡು ನಿಸರ್ಗದ ಸವಾಲ್ ನಾಥುಲಾ ನೋಡಲು ಹೊರಡಿ. ಹಾಗೆ ಹೋಗುವಾಗ ನಿಮ್ಮ ಬಳಿ ಭಾರತದ ಮಿಲಿಟರಿ ನೀಡಿದ ಅನುಮತಿ ಪತ್ರ ಇರಲೇಬೇಕು ಮತ್ತು ಭಾರತೀಯ ನಾಗರೀಕರಿಗೆ ಮಾತ್ರ ಈ ಪರವಾನಿಗೆ ಕೊಡಲಾಗುತ್ತದೆ ಎನ್ನುವುದು ನೆನಪಿರಲಿ.

ಸಿಕ್ಕಿಂನ ರಾಜಧಾನಿ ಗ್ಯಾಂಗ್ಟಕ್‌ನಿಂದ 54 ಕಿ.ಮೀ ಪೂರ್ವದಲ್ಲಿದೆ ನಾಥುಲಾ. ಒಂದು ಗಂಟೆಯಲ್ಲಿ ತಲುಪಬೇಕಾದ ಜಾಗ ಸೇರಲು 4 ಗಂಟೆಗಳು ಹಿಡಿಯುತ್ತವೆ. ಬಲು ತ್ರಾಸದಾಯಕ ಪಯಣ.

ಒಂದುಕಡೆ ಟಂಡ್ರಾ ಸಸ್ಯ ವರ್ಗ, ಜ್ಯೂನಿಫರ್ ಹುಲ್ಲುಗಾವಲು, ನೆಲದ ಆರ್ಕಿಡ್‌ಗಳು ಮಾಯಗಾರನೊಬ್ಬ ಮಾಡಿಟ್ಟ ವಿನ್ಯಾಸದಂತೆ ಕಂಗೊಳಿಸಿ ಮನಸೆಳೆದರೆ; ಇನ್ನೊಂದೆಡೆ ಮೇಲಿಂದ ದಢದಡನೆ ಹರಿವ ಜರಿಗಳು, ರಸ್ತೆಯನ್ನೆ ಕೊಚ್ಚಿಕೊಂಡು ಹೋಗುತ್ತಿರುವ ದೃಶ್ಯ ಕಾಣುತ್ತದೆ. ಅದರ ಮೇಲೆ ಹಾಕಿರುವ ಮರದ ದಿಮ್ಮಿಗಳ ಮೇಲೆಯೆ ನಮ್ಮ ವಾಹನ ಸಾಗಬೇಕು. ಅಲ್ಲಲ್ಲಿ ತೇಲುವ ಮೋಡಗಳ ಮೋಹಕ ದೃಶ್ಯಗಳು, ಆರಾಮವಾಗಿ ಮೇಯುತ್ತಿರುವ ಚಮರೀಮೃಗಗಳು ಕಾಣಸಿಗುತ್ತವೆ.

ಕಡಿದಾದ ತಿರುವುಗಳು, ಒರಟು ರಸ್ತೆ, ಎತ್ತರದ ಮಂಜು ಕವಿದ ಪರ್ವತಶ್ರೇಣಿ, ದಾರಿಯುದ್ದಕ್ಕೂ ಅಲ್ಲಲ್ಲಿ ಭೀಕರ ಭೂಕುಸಿತದ ದೃಶ್ಯಗಳು, ಯಾವುದೇ ತಡೆಗೋಡೆಯಿಲ್ಲದ ಆಳವಾದ ಕಮರಿಗಳು, ಎದೆ ಜಲ್ ಎನ್ನಿಸುವ ಆಳವಾದ ರುದ್ರ ರಮಣೀಯ ಕಣಿವೆಗಳನ್ನು ಹಾದು ಪಯಣದ ಕೊನೆಯಲ್ಲಿ ಅಂತೂ ಇಂತೂ 'ಕೇಳುವ ಕಿವಿಗಳ' ಜಾಗದಲ್ಲಿ ಇರುತ್ತೀರಿ. ಅರ್ಥವಾಗಲಿಲ್ಲವೆ? ನಾಥುಲಾ ಎಂದರೆ ಟಿಬೇಟಿಯನ್ ಭಾಷೆಯಲ್ಲಿ 'ಕೇಳುವ ಕಿವಿಗಳು' ಎಂದರ್ಥ.

ಇದು ನಾಥುಲಾ ಅಥವಾ ನಾಥುಲಾ ಪಾಸ್. ಭಾರತ ಮತ್ತು ಚೀನಾದ ನಡುವೆ ವಾಣಿಜ್ಯ ಸಂಪರ್ಕವಿರುವ ಪ್ರಮುಖ ಆಯಕಟ್ಟಿನ ಸ್ಥಳ. ಇಲ್ಲಿ ಎರಡೂ ದೇಶಗಳ ಮಿಲಿಟರಿ ಪೋಸ್ಟ್‌ಗಳಿವೆ. ಲ್ಹಾಸಾ, ಸಿಕ್ಕಿಂ ಮತ್ತು ಪೂರ್ವ ಭಾರತದ ಹಳೆಯ ಸಿಲ್ಕ್ ಮಾರ್ಗ ದಾಟಲು ನಾಥುಲಾ ಪಾಸ್ ಬಳಸಲಾಗುತ್ತದೆ. ಪುರಾತನ ವಾಣಿಜ್ಯ ಗಡಿ ಪೋಸ್ಟ್‌ಗಳಲ್ಲಿ ಒಂದಾಗಿದೆ.

ನಾಥುಲಾ ತಲುಪಿದ ಕೂಡಲೇ ಮೈಎಲ್ಲಾ ಗಢಗುಟ್ಟಿಸುವ ಅಸಾಧ್ಯ ಚಳಿ ಅಮರಿಕೊಳ್ಳುತ್ತದೆ. ಇಲ್ಲಿರುವ ವಿರಳ ಆಮ್ಲಜನಕದಿಂದ ಉಸಿರಾಟ ಕಷ್ಟವಾಗುತ್ತದೆ. ಎದೆ ಬಡಿತ ಹೆಚ್ಚಾಗುತ್ತದೆ. ಮೇಲೆ ಹೋಗಲು 90 ಮೆಟ್ಟಿಲುಗಳನ್ನು ಹತ್ತುವಾಗ ಪ್ರತಿ ಹೆಜ್ಜೆ ಎತ್ತಿಡುವಾಗಲೂ ತ್ರಾಸವೆನಿಸುತ್ತದೆ. ಸಾಮಾನ್ಯವಾಗಿ ಹೃದ್ರೋಗಿಗಳು, ವಯಸ್ಸಾದವರು ಮತ್ತು ಮಕ್ಕಳನ್ನು ಕರೆತಾರಬಾರದೆಂಬ ಸೂಚನೆಯಿದೆ. ಕರ್ಪೂರವನ್ನು ಅಘ್ರಾಣಿಸುತಾ ಸ್ವಲ್ಪ ಮಟ್ಟಿಗೆ ಉಸಿರಾಟವನ್ನು ತಹಬದಿಗೆ ತರಬಹುದು.

1962 ನೇ ಇಸವಿಯ ತನಕ ನಾಥುಲಾದ ಮೂಲಕ ಟಿಬೆಟ್ ಹಾಗೂ ಭಾರತಗಳ ನಡುವೆ ವ್ಯಾಪಾರ ವಹಿವಾಟು ಭರದಿಂದಲೇ ನಡೆಯುತ್ತಿತ್ತು. ಅದೇ ವರ್ಷ ಚೀನಾ ಬಾರತದ ಮೇಲೆ ಅನಿರಿಕ್ಷಿತ ಧಾಳಿ ನಡೆಸಿ ಇಲ್ಲಿ ಎರಡು ದೇಶಗಳ ನಡುವೆ ಯುದ್ಧ ನಡೆಯಿತು. ಈ ಸಮರದಲ್ಲಿ ಅಸುನೀಗಿದ ಭಾರತೀಯ ಸೈನಿಕರ ನೆನಪಿಗಾಗಿ ನಿರ್ಮಿಸಿರುವ ಸ್ಮಾರಕವು ಅಲ್ಲಿನ ನೀರವ ವಾತಾವರಣದಲ್ಲಿ ಮೌನವಾಗಿ ಶೋಕಗೀತೆ ಹಾಡುತ್ತಿವೆಯೇನೊ ಎನ್ನಿಸುತ್ತದೆ. ಅದರ ಮೇಲಿರಿಸಿರುವ ಲಿಲ್ಲಿ ಆರ್ಕಿಡ್ ಹೂಗುಚ್ಛದ ಮೇಲಿರುವ ಮಂಜಿನಹನಿಗಳು ಕಣ್ಣೀರ ಹನಿಗಳಂತೆ ಗೋಚರಿಸುತ್ತವೆ.

ನಂತರದ ದಿನಗಳಲ್ಲಿ ಭಾರತ ನಾಥುಲಾದ ಗಡಿಯನ್ನು ಮುಚ್ಚಿಬಿಟ್ಟಿತು. ಕಾಲ ಕಳೆದಂತೆ

